Regd. No M. 1299 SATYAVADI Fodunde 1917

# ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 291 | ಶನಿವಾರ 12—7—47 | ಬಿಡಿ ಪ್ರತಿ 3 ಪೈ

## ವೃತ್ತಾಂತ ಸಂಗ್ರಹ

ನವದೆಹಲಿ ಜು 10 — ಪ್ರಿ॥ ಎಲಿಜಬತ್ ಲೆ॥ ಫಿಲಿಪ್ ಮೌಂಟ್‌ಬೇಟ್‌ನ್ನರಿಗೆ ನಡೆಯಲಿರುವ ವಿವಾಹದ ಒಗ್ಗೆನ್ನೆನ್ನೆ ವೈಸ್ರಾಯಿ ಅಧ್ಯಕ್ಷತೆಯಲ್ಲಿ ಭಾರತ ಮುಖಂಡರ ಸಭೆ ಜರುಗಿ ಅಭಿನಂದನಾ ನಿರ್ಣಯವನ್ನು ಮಾಡಲಾಯಿತು.

ಂ ಂ

ನವದೆಹಲಿ ಜು 10 — ಗಾಂಧೀಜೀಯವರ ಪ್ರಾರ್ಥನಾ ಸಭೆಯಲ್ಲಿ ವೈಸ್ರಾಯರ ಪುತ್ರಿಯಿಸ್. ಪಾಮೆಲ್ ಮೌಂಟ್ ಬೇಟ್ ಭಾಗವಹಿಸಿದ್ದರು.

ಂ ಂ

ದೆಹಲಿಯಲ್ಲಿ ಮಂಗಗಳ ಕಾಟ ಅಧಿಕವಾಗಿದೆಯಂತೆ ! ಮಂಗಗಳು ಅಮೆರಿಕಾಕ್ಕೆ ಅಗತ್ಯವಂತೆ ! ಅವುಗಳ ಗ್ರಂಥಿಗಳು ಸಂಶೋಧನೆಗೆ ಬೇಕಂತೆ ! ಮಂಗಗಳ ರಫ್ತಿನ ಬಗ್ಗೆ ಪರಿತೀಲನೆ ನಡೆಯುತ್ತಿದೆಯಂತೆ !

ಂ ಂ

ಲಂಡ್ ಜಿಲ್ಲೆಯ ಕೌಂಸಿಲರವರು 70 ಸಾವಿರ ಮಂದಿ ರೋಗಿಗಳಿಗೆ ಏಕ ಕಾಲದಲ್ಲಿ ಚಿಕಿತ್ಸೆ ಮಾಡುವ ಏರ್ಪಾಡು ಮಾಡುವರು.

ಂ ಂ

ಯುದ್ಧದಿಂದ 5 ಸಾವಿರ ಅಡ್ಜುಯಂತ್ರಗಳು ಬ್ರಿಟನ್ನಿನಲ್ಲಿ ನಾಶವಾಗಿ ಹೋದವು.

ಂ ಂ

ಪ್ರಪಂಚದಲ್ಲೆಲ್ಲಾ ಬೆಳ್ಳಿಯನ್ನು ಹೆಚ್ಚಾಗಿ ಉತ್ಪತ್ತಿ ಮಾಡುವ ದೇಶವು ಮೆಕ್ಸಿಕೋ.

ಂ ಂ

1780 ರಲ್ಲಿ ನಡೆದ ಮೊದಲನೇ ಡರ್ಬಿ ಸ್ವೀಪಿನಲ್ಲಿ ಸರ್ ಫ್ರಾನ್ಸಿಸ್ ಬೂಕಿ ಓಕ್ಲೆ ಡಯೊಮೇಡ್ ಎಂಬ ಹೆಸರಿನ್ನ ಕುದುರೆಯ ಮಾಲಿಕ ಗೆದ್ದನು.

## ರಾಷ್ಟ್ರ ವಿಭಜನೆಯ ಫಲ

——

1) ಲಾಹೋರಿನ ಪ್ರಾಮುಖ್ಯತೆಯು ಕಡಿಮೆಯಾಯಿತು. ಹೋಗಲಿ ಶಾಂತಿಯಾದರೂ ಏರ್ಪಟ್ಟಿರುವದೇ ಅಂದರೆ ಅದೂ ಕಾಣಬರುವದಿಲ್ಲ.

2) ಬೊಂಬಾಯಿಯು ಪ್ರಾಮುಖ್ಯತೆಯು ಎಷ್ಟೋ ಹೆಚ್ಚಿತು. ಇದುವರೆಗೂ ಕರಾಚಿಯು ಮೂಲಕ ನಡೆಯುತ್ತಿದ್ದ ವಿದೇಶ ವ್ಯಾಪಾರವೆಲ್ಲಾ ಇನ್ನು ಮುಂದೆ ಬೊಂಬಾಯಿಂದಲೇ ನಡೆಯುತ್ತದೆ

## ವೆಂಕಟಾಪುರದ ಸಮಾಚಾರ

——

ಈ ಗ್ರಾಮದಲ್ಲಿ ಒಬ್ಬ ಸಣ್ಣ ರೈತನ ಮಗನಿಗೆ ಮದುವೆಯಾಯಿತು. ಆಗ ಹರಿಜನರಿಗೆ ತಾಂಬೂಲವನ್ನು ಕೊಟ್ಟರು. ಇದಕ್ಕಾಗಿ ಗ್ರಾಮದ ಹಿರಿಯರು ತಾಂಬೂಲವನ್ನು ತೆಗೆದುಕೊಳ್ಳದೆ ಅಗೌರವ ಪಡಿಸಿದರು. ಕೊನೆಗೆ ಮದುವೆಗೆ ಸಂಬಂಧಿಸಿದವರನ್ನು ಭಜನೆ ಮಂದರಕ್ಕೆ ಕರಿಸಿಕೊಂಡು ಬಂದು ಗಂಡಿನಿಂದ ಕ್ಷಮಾಪಣೆಯನ್ನು ಪಡೆದು ತಾಂಬೂಲವನ್ನು ಸ್ವೀಕರಿಸಿದರು.

(ಮೂ, ಭೂ)

## ಭಾರತ ಧರ್ಮ ಸಂಘದವರು ಕೋರುತ್ತಿರುವುದೇನು ?

1 ಭಾರತ ಮಾತೆಯು ಖಂಡನೆಯು ಕೂಡದು.

2 ಗೋಮಾತೆಯು ವಧೆಯು ಇರ ಕೂಡದು,

2 ಧರ್ಮಮಾತೃದ್ರೋಹವು ನಿಲ್ಲ ತಕ್ಕದ್ದು.

4 ಹಿಂದೂ ಆ ಒದಲಾವಣೆ ಮಾಡಕೂಡದು

ಈ ಉದ್ದೇಶಗಳ ಸಾಧನೆಗಾಗಿಯೇ ಧರ್ಮ ಯುದ್ಧವನ್ನು ಹೂಡಿರುವುದು. ಧರ್ಮಪರಾಯಣರೆಲ್ಲರೂ ಈ ಯುದ್ಧದಲ್ಲಿ ಭಾಗವಹಿಸಿ ಹಿಂದೂ ಜಾತಿಯನ್ನು ರಕ್ಷಿಸಿಬೇಕೆಂದು ಅವರು ಕೋರಿರುವರು.

——

ದೆಹಲಿಯಲ್ಲಿ ಏರ್ಪಡಿಸಿದ್ದ ಧರ್ಮಯುದ್ಧ ಶಿಬಿರವು ಅಸುರೀ ಸಂಪದವುಳವರಿಂದ ಸುಡಲ್ಪಟ್ಟಿತು. ಪುರಾತನ ಗ್ರಂಥಗಳೇ ಮೊದಲಾವುವು ಸುಟ್ಟು ಹೋದವೆಂದು ತಿಳಿಯಬರುತ್ತೆ.

ನವದೆಹಲಿ ಜು 10 — ಕಾಂಗ್ರೆಸ್ ಗಡಿನಾಡಿನ ರೆಫರಂಡಂ ಬಹಿಷ್ಕರಿಸುವದು ಜೂ 3 ಂ ಬ್ರಿಟಿಷ್ ಹೇಳಿಕೆ ವಿರೋಧವಾದುದು ಎಂದು ಕೇಂದ್ರ ಸರ್ಕಾರದ ಸಚಿವ ಸರ್ದಾರ್ ಅಬ್ದುಲ್ ರಬ್ ನಿಶ್ತಾರ್ ತಿಳಿಸಿದ್ದಾರೆ.

ಭೂಪಾಲ್, ಜು 10 — ಸಂಸ್ಥಾನದ ಪ್ರಜಾಪರಿಷತ್ತು ಭೂಪಾಲ್ ಸಂಸ್ಥಾನ ರಾಜ್ಯಾಂಗ ಸಭೆಗೆ ಸೇರಬೇಕೆಂದು ನಿರ್ಣಯಿಸಿದೆ.

ಬೆಂಗಳೂರು ಜು 10 — ಪ್ರತಿದಿನ ರೂ 35 ಭತ್ಯ, ಎರಡು ಪ್ರಯಾಣ ತರಗತಿ ರೈಲ್ವೆ ದರ ಮತ್ತು ಪೆ

## ವರ್ಷಾಂತರ್ಯದಲ್ಲಿ ಭಾರತದಿಂದ ಬ್ರಿಟಿಷ್ ಸೈನ್ಯ ವಾಪಸ್ಸು

ಲಂಡ್ ಜು 11 — ಭಾರತ ಸ್ವಾತಂತ್ರ್ಯದ ಮಸೂದೆಯು 2 ನೇ ಪಠಣವು ಕಾಮನ್ಸ್ ಸಭೆಯಲ್ಲಿ ಪಾಸಾಯಿತು. ಭಾರತದಿಂದ ವರ್ಷಾಂತ್ಯದಲ್ಲಿ ಬ್ರಿಟಿಷ್ ಸೈನ್ಯ ವಾಪಸ್ಸಾಗುವುದೆಂದು ಅಟ್ಲಿಯವರು ತಿಳಿಸಿದರು.

## ಇಂದಿನ ವರ್ತಮಾನ

ನವದೆಹಲಿ ಜುಲೈ 10 — ಮುಸ್ಲಿಂ ಸಂಸ್ಥಾನಗಳು ಪಾಕೀಸ್ತಾನ ರಾಜ್ಯಾಂಗ ಸಭೆಗೆ ಸೇರಬೇಕು ಎಂದು ಅಖಿಲ ಭಾರತ ಮುಸ್ಲಿಂ ಸಂಸ್ಥಾನಿ ಪರಿಷತ್ತು ನಿರ್ಣಯಮಾಡಿದೆ.

ಂ ಂ

ಅಮೆರಿಕದಲ್ಲಿಯ ಎಲ್ಲಾ ರೈಲುಗಳಲ್ಲಿಯೂ ಒಟ್ಟು ಎಷ್ಟು ಮಂದಿ ಪ್ರಯಾಣ ಮಾಡುವರೋ ಅಷ್ಟು ಮಂದಿ ಪ್ರಯಾಣಿಕರು ಬ್ರಿಟನ್ನಿನ ಒಂದು ದಕ್ಷಿಣ ರೈಲ್ವೆಯಲ್ಲಿ ಪ್ರಯಾಣ ಮಾಡುವರು.

ಂ ಂ

ನವದೆಹಲಿ ಜು 10 — ರಾಷ್ಟ್ರೀಯ ಉಡುಪಿನ ಬಗ್ಗೆ ಸಮಿತಿ ಏರ್ಪಡಬೇಕೆಂಬ ನಿರ್ಣಯ ಮುಂದಿನ ರಾಜ್ಯಾಂಗ ಸಭಾಧಿವೇಶನದಲ್ಲಿ ಬರಲಿದೆ.

ಂ ಂ

ಲಂಡ್ ಜು 10 — ಭಾರತವನ್ನು ಸಾಂರಾಜ್ಯಕ್ಕೆ ಉಳಿಸಿದ ಮಹಾನ್-ಭಾವಸು ಅಟ್ಲಿ ಎಂದು ಬೆವಿನ್ನರು ಪ್ರಶಂಸಿಸಿದರು.

ಂ ಂ

ಅಂಕಾರಾ ಜು 10 —ಟರ್ಕಿಯು ಅಮೆರಿಕಾದಿಂದ 10 ಕೋಟಿ ಡಾಲರ್ ಸಹಾಯ ಪಡೆಯುವ ಒಪ್ಪಂದವು ಶನಿವಾರ ರುಜು ಮಾಡಲಾಗುತ್ತೆ.

ಂ ಂ

ಮೈಸೂರು — ಶ್ರೀಮನ್ ಮಹಾರಾ ಜರವರ 29 ನೇ ವರ್ಧಂತ್ಯುತ್ಸವದ ತಿಗಾಗಿ ಅಲನಹಳ್ಳಿಯಲ್ಲಿ ಗಿಡ ಸಮಾರಂಭದಲ್ಲಿ ವಂ ರಾಮತ್ ಶ್ರೀ ಸಿದ್ಧಪ್ಪನವರೂ ಡೆಪ್ಯೂಟಿ ಕಮಿ ರ್ ಶ್ರೀ ನಾಗರಾಜರಾವ್‌ರೂ ಹಿಸಿದ್ದರು.

—ಂ

ಧ. ಯು. ಸ, ಬ

ಪ್ರ.— ರಾಜ

ಕಾರ್ಯ.

ಸತ್ಯ ವಾದ

## ೧೯೪೭ ರ ಉದ್ಯಮದಲ್ಲಿ

— —

ಬಿ ಟೀಷು ಇಂಡಿಯಾದಲ್ಲಿ 60229 ಮಂದಿ ಜೈಲುಗಳಿಗೆ ಕಳುಹಿಸಲ್ಪಟ್ಟರು.

18000 ಮಂದಿ ಡಿಟ್ಯೈ ಮಾಡಲ್ಪಟ್ಟರು

940 ಮಂದಿ ಪೋಲೀಸು ಮಿಲಿಟರಿ ತುಪಾಕೀ ಗುಂಡುಗಳಿಗೆ ಎದೆಗಳನ್ನು ಕೊಟ್ಟರು.

1630 ಮಂದಿ ಏಟುಗಳನ್ನು ತಿಂದರು

238 ಸಮಯಗಳಲ್ಲಿ ಪೋಲೀಸರು ತುಪಾಕಿಗಳನ್ನು ಸಿಡಬೇಕಾಗಿ ಬಂದಿತು

60 ಸ್ಥಳಗಳಲ್ಲಿ ಮಿಲಿಟರಿಯನ್ನು ಕರೆಯಬೇಕಾಗಿ ಬಂತು,

5 ಸ್ಥಳಗಳಲ್ಲಿ ವಿಮಾನಗಳು ಕೂಡ ಉಪಯೋಗಿಸಬೇಕಾಗಿ ಬಂದಿತು.

ಇಂದು ಭಾರತ ದೇಶವು ಅಧಿನಿವೇಶ ಪ್ರತಿಪಕ್ಷಿಯನ್ನಾದರೂ ಸಂಪಾದಿಸಿತಂದರೆ ಅದು ಮೇಲ್ಕಂಡ ತ್ಯಾಗಗಳ ಫಲವು.

For Quality Printing
L. N. Press
Sriramp et, MYSORE

## ಅಂತ್ಯಜನ ಉಪವಾಸ ವ್ರತ

ಬೆಂಗಾಲು ಪ್ರಾಂತೀಯ ಅಂತ್ಯಜ ನಾಯಕರಾದ ಶ್ರೀ ಪ ರ. ಠಾಕೂರ್ ರು ಸುಮಾರು 4 ವಾರಗಳ ಹಿಂದೆ ಶ್ರೀ ಗಾಂಧಿಯವರನ್ನು ಕಂಡು ' ಬೆಂಗಾಲು ವಿಭಜನೆಯಾದಲ್ಲಿ ಹರಿಜನರ ಗತಿಯು ಅಂಧಕಾರಮಯವಾಗುವದು. ಇದಕ್ಕೆ ನೀವೇನು ಹೇಳುವಿರಿ ' ಎಂದು ಪ್ರಶ್ನಿಸಲು ಅಂಥಾ ವಿಭಜನೆಯ ಸಮಯದಲ್ಲಿಯ ಅಂತ್ಯಜರ ಅಧಿಕಾರಗಳು ಉಪೇಕ್ಷಿಸಲ್ಪಡುವದಿಲ್ಲವೆಂದು ಹೇಳಿದರು. ' ಈಗ ವಿಭಜನೆಯ ಮೂಲಕ ಉಂಟಾಗುವ ಹಾನಿಗಳನ್ನು ಕುರಿತು ಬಾಯಿ ಎತ್ತುತ್ತಿಲ್ಲವಾದ್ದರಿಂದ ನಾನು ಮರಣ ಪರ್ಯಾಂತ ನಿರಶನ ವ್ರತವನ್ನವಲಂಬಿಸುವೆನು " ಎಂದು ಪ್ರಕಟಿಸಿರುವನು.

( ದಿ. ವಾ. )

ಸ ತ್ಯ ವಾ ದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ವಾರ್ಷಿಕ ಚಂದ ಪಂಸ್ಥಳಕ್ಕೆ
ಅಂಹವೆಚ್ಚ ಸೇರಿ ರೂ. 9.
ಸೋಮವಾರದ ಸಂಚಿಕೆ ಮಾತ್ರ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

CITY MUNICIPAL OFFICE
MYSORE, Dated 3 rd July 1947

# Notification

M5 P187 / 46-47

Notice is hereby given

to the inhabitants of the Mysore City Municipality, that the Municipal Council have resolved to amend the bye-law relating to the levy of Octroi on dutiable articles so as to exempt the bonafide khaddar and handloom products manufactured within the State and Charakas and their spare parts of the description detailed below and to insert the following under exceptions to the schedule of the taxes— octroi.

No. 5. Bonafide khaddar certified to be as either by All India Spinning Association or by Government of Mysore or the Chairman of the Village Panchayet or by the Amildar of a Taluk or by the President of a District Board or Municipality.

No. 6. Hand looms products manufactured within the State bearing the seal of the department of Industries and Commerce other than handloom silk goods.

No. 33, Charakas and their spare parts.

Any person having objections to the above amendment may prefer the same in writing to the undersigned within one month from the date of this notification in the Official Gazette, after which no objection will be taken into consideration.

( Sd ) R. Ramachandra Rao Bhombore
President

ಶ್ರೀ ' ಓಂ ' ಗುರುತಿನ
ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವರ ಪೂಜೆಗೂ ಮತಾಚಾರ ಸಮಾರಂಭಗಳಲ್ಲಿಯೂ ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕ [illegible]ದೆ

ವಾಲ್.

ವುಡ್‌ಲ್ಯಾಂಡ್ಸ್
At Opera
13 th Glorious Week
ತಾ|| 1[illegible]-47 ರಿಂದ
ಜನಭ[illegible] 1 ನೇ ವಾರ
ಟಿ ಎಸ್ ಬಾಲಯ್ಯ, ತನಮೊದಲ[illegible]
ಮಾಲತಿ ರಾಮಚಂದ್ರ ನಟಿಸಿರುವ
ರಾಜಕುಮಾರ
(ಕ[illegible]